2019 ಕ.ತೀ.ವ 1411

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ಎಚ್.ಬಿ. ಪ್ರಭಾಕರ ಶಾಸ್ತ್ರಿ

## ಶ್ರೀ ಯೋಗೇಶ್ ಪೂಜಾರಿ -ವಿರುದ್ಧ- ಶ್ರೀ ಕೆ. ಶಂಕರ ಭಟ್*

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ರ ಪ್ರಕರಣ 138ರ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಅಪೀಲುದಾರ ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದ ಅಡಿಯಲ್ಲಿ ಅಪೀಲಿನ ಮೂಲಕ ದಾಖಲಿಸಿದ ದೂರಿನಲ್ಲಿ ಸಿ.ಸಿ.ಸಂಖ್ಯೆ: 365/2005ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಸುಳ್ಯ, ದಕ್ಷಿಣ ಕನ್ನಡ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿವಿಚಾರಣಾ ನ್ಯಾಯಾಲಯ' ಎಂದು ಉಲ್ಲೇಖಿಸಲಾಗಿದೆ) ಇವರು ದಿನಾಂಕ: 18.02.2010ರಂದು ಖುಲಾಸೆಯ ತೀರ್ಪನ್ನು ನೀಡಿರುತ್ತಾರೆ, ಇದರ ವಿರುದ್ಧ ಪ್ರತ್ಯರ್ಜಿದಾರ ಸದರಿ ಅಪೀಲನ್ನು ಸಲ್ಲಿಸಿರುವನು. ಸದರಿ ಖುಲಾಸೆ ತೀರ್ಪಿನ ವಿರುದ್ಧ ಅಪೀಲುದಾರ/ದೂರುದಾರನು ಈ ಅಪೀಲನ್ನು ದಾಖಲಿಸಿರುವನು.

ಅಧಿವಿಚಾರಣಾ ನ್ಯಾಯಾಲಯದಲ್ಲಿ ದೂರುದಾರನ ಮೊಕದ್ದಮೆಯ ಸಾರಾಂಶ ಹೀಗಿದೆ. ಪ್ರತ್ಯರ್ಜಿದಾರ/ ಆಪಾದಿತನು ಸಾಲದ ಮರುಪಾವತಿಗೆ ಸಂಬಂಧಿಸಿದಂತೆ ದಿನಾಂಕ: 10.12.2004ರ ತಣ್ಣೀರುಪಂತ ಸೇವಾ ಸಹಕಾರಿ ಬ್ಯಾಂಕ್ ನಿಯಮಿತದ ಚೆಕ್ ಸಂಖ್ಯೆ: 0380ರ ಮೂಲಕ ರೂ.1,50,000/- ಗಳ ಚೆಕ್ ಅನ್ನು ದೂರುದಾರನ ಹೆಸರಿಗೆ ಕೊಟ್ಟಿರುತ್ತಾನೆ. ಫಿರ್ಯಾದುದಾರನು ಚೆಕ್ ಅನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಅದು 'ಧನಾದೇಶಕನಿಂದ ಸಂದಾಯ ಸ್ಥಗಿತಗೊಂಡಿರುತ್ತದೆ' ಎಂಬ ಹಿಂಬರಹದೊಂದಿಗೆ ಆತನ ಬ್ಯಾಂಕ್‌ನಿಂದ ಚೆಕ್ ಅಮಾನ್ಯಗೊಂಡು, ದಿನಾಂಕ: 23.12.2004ರಂದು ದೂರುದಾರನ ಕೈ ಸೇರಿರುತ್ತದೆ. ಈ ಸಂಬಂಧದಲ್ಲಿ ಫಿರ್ಯಾದುದಾರನು, ಕಾನೂನುಸಮ್ಮತ ನೋಟೀಸನ್ನು ಜಾರಿ ಮಾಡಿ, ನೋಟೀಸ್

*ಕ್ರಿಮಿನಲ್ ಅಪೀಲು ಸಂಖ್ಯೆ: 467/2010, ದಿನಾಂಕ 20ನೇ ನವೆಂಬರ್, 2018.

ಅನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಚೆಕ್‌ನಲ್ಲಿ ನಮೂದಿಸಿದ ಮೊತ್ತವನ್ನು ಮರು ಪಾವತಿ ಮಾಡಬೇಕೆಂದು ಒತ್ತಾಯಿಸಿ ಆಪಾದಿತನಿಗೆ ನೋಟೀಸು ಅನ್ನು ಕಳುಹಿಸಿರುತ್ತಾನೆ. ಆದಾಗ್ಯೂ, ಹೊರಡಿಸಿದ ಸದರಿ ನೋಟಿಸು ವಿಳಾಸದಾರರು ಊರಿನಲ್ಲಿ ಇಲ್ಲ ಹಾಗೂ ಪತ್ರವನ್ನು ತೆಗೆದುಕೊಳ್ಳಲು ಯಾರು ಇಲ್ಲ ಎಂಬ ಹಿಂಬರಹದೊಂದಿಗೆ ವಿಳಾಸದಾರರಿಗೆ ಜಾರಿಯಾಗದೇ ದೂರುದಾರನ ಕೈ ಸೇರಿರುತ್ತದೆ. ಇಲ್ಲಿಯವರೆಗೂ ಆಪಾದಿತನು ಕಾನೂನುಸಮ್ಮತ ನೋಟೀಸಿನಲ್ಲಿ ಸಲ್ಲಿಸಿದ ಬೇಡಿಕೆಯನ್ನು ಆಪಾದಿತನು ಪೂರೈಸಿರುವುದಿಲ್ಲ. ಈ ಕಾರಣದಿಂದ ದೂರುದಾರನು ಆಪಾದಿತನ ವಿರುದ್ಧ ಆಪಾದಿತನು ದಂಡನೀಯ ಅಪರಾಧಕ್ಕಾಗಿ ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದೂರನ್ನು ದಾಖಲಿಸಲು ಅನಿವಾರ್ಯತೆಗೊಳಗಾಗಿದ್ದಾನೆ.

ತನ್ನ ಮೊಕದ್ದಮೆಯನ್ನು ರುಜುವಾತುಪಡಿಸುವುದಕ್ಕೆ ಫಿರ್ಯಾದುದಾರನು ಸ್ವತಃ ತಾನೇ ಪ್ರಾ.ಸಾ.1 ಆಗಿ ವಿಚಾರಣೆಗೊಳಪಡಿಸಿಕೊಂಡಿದ್ದಾನೆ ಮತ್ತು ನಿಶಾನೆ ಪಿ.1 ರಿಂದ ಪಿ.10ರ ವರೆಗಿನ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ. ಆಪಾದಿತನ ಕಡೆಯಿಂದ, ಯಾವುದೇ ಸಾಕ್ಷಿಗಳನ್ನೂ ವಿಚಾರಣೆ ಮಾಡಿರುವುದಿಲ್ಲ. ಆದಾಗ್ಯೂ, ಆಪಾದಿತನ ಪರವಾಗಿ ನಿಶಾನೆ ಡಿ.1 ರಿಂದ ಡಿ.12 ಅನ್ನು ದಸ್ತಾವೇಜುಗಳಾಗಿ ಗುರುತು ಮಾಡಲಾಗಿದೆ. ಎರಡೂ ಕಡೆಯ ವಾದ–ವಿವಾದಗಳನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ದಿನಾಂಕ: 18.02.2010ರಂದು ಹೊರಡಿಸಿದ ಪ್ರಶ್ನಿತ ತೀರ್ಪಿನ ಮೂಲಕ ಆರೋಪಿಸಲಾದ ಅಪರಾಧದಿಂದ ಆಪಾದಿತನನ್ನು ಖುಲಾಸೆಗೊಳಿಸಿತು. ಸದರಿ ತೀರ್ಪಿನ ವಿರುದ್ಧ ಅಪೀಲುದಾರನು ಈ ಅಪೀಲನ್ನು ಸಲ್ಲಿಸಿರುವನು.

ಈ ಮೊಕದ್ದಮೆಯಲ್ಲಿ ಆಪಾದಿತನು ದೂರುದಾರ ಫಿರ್ಯಾದುದಾರನಿಗೆ ಹೊರಡಿಸಿದ ಪ್ರಶ್ನಿತ ಚೆಕ್ ವಿವಾದವಾಗಿರುವುದಿಲ್ಲ. ಆಪಾದಿತನು ಸ್ವತಃ ತಾನೇ ಪ್ರಾ.ಸಾ.1 ಗೆ ತನ್ನ ಪಾಟೀ ಸವಾಲಿನಲ್ಲಿ ನಿರ್ದಿಷ್ಟವಾಗಿ ನೀಡಿದ ಹೇಳಿಕೆಯಲ್ಲಿ ಪ್ರಶ್ನಿತ ಚೆಕ್ ಅನ್ನು ತಾನೇ ದೂರುದಾರನಿಗೆ ಹೊರಡಿಸಿರುವುದಾಗಿ, ಅದರಲ್ಲೂ ತಾನು ದೂರುದಾರನಿಂದ ಈಗಾಗಲೇ ಪಡೆದ ಹಿಂದಿನ ಸಾಲ ಮೊತ್ತ ರೂ.20,000/– ಹಾಗೂ ರೂ.10,000/– ಕ್ಕೆ ಆಧಾರವಾಗಿ ಪ್ರಶ್ನಿತ ಚೆಕ್ ಅನ್ನು ನೀಡಿರುವುದಾಗಿ ಹೇಳಿಕೆ ಕೊಟ್ಟಿರುತ್ತಾನೆ. ಆದರೆ

ಪ್ರಾ.ಸಾ.1 ಸದರಿ ಹೇಳಿಕೆಯನ್ನು ಸತ್ಯವೆಂದು ಅಂಗೀಕರಿಸಿರುವುದಿಲ್ಲ. ಆದ್ದರಿಂದ, ಆಪಾದಿತನು ಮಾಡಿದ ಹೇಳಿಕೆಯನ್ನು ಫಿರ್ಯಾದುದಾರನು ಅಂಗೀಕರಿಸದೇ ಉಳಿದುಕೊಂಡಿರುವ ಈ ಹೇಳಿಕೆಯನ್ನು ರುಜುವಾತುಪಡಿಸುವ ಸಲುವಾಗಿ ಆರೋಪಿಯ ಪ್ರತಿವಾದವನ್ನು ಪರಿಗಣಿಸುವ ಅಗತ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಪುಷ್ಟೀಕರಿಸುವ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನಾಗಲೀ ಅಥವಾ ದಸ್ತಾವೇಜೀಯ ಸಾಕ್ಷ್ಯವನ್ನಾಗಲಿ ಮಂಡಿಸಲು ಅಗತ್ಯಪಡಿಸಬೇಕಾಗುತ್ತದೆ. ಆದಾಗ್ಯೂ, ಮೇಲಿನ ಅಭಿಪ್ರಾಯೋಕ್ತಿಯಂತೆ ಆಪಾದಿತನು ಮಾತ್ರವೇ ಅಂಥ ಹೇಳಿಕೆಯನ್ನು ನೀಡಿರುತ್ತಾನೆಯೇ ಹೊರತು, ಅವನ ಪಾಟೀಸವಾಲಿನಲ್ಲಿ ಪ್ರಾ.ಸಾ.1ಕ್ಕೆ ಅವನ ಪ್ರತಿವಾದದಲ್ಲಿ ಅದನ್ನು ಪುಷ್ಟೀಕರಿಸುವಂತಹ ಯಾವುದೇ ವಸ್ತುವಿಷಯವನ್ನು ಮಂಡಿಸಿರುವುದಿಲ್ಲ. ಆದ್ದರಿಂದ, ಇದೇ ಹೋಲಿಕೆಯ ಸನ್ನಿವೇಶಗಳನ್ನು ಹೊಂದಿರುವ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ *(2015) 8 ಎಸ್‌ಸಿಸಿ 378*ರಲ್ಲಿ ವರದಿಯಾಗಿರುವ *ಟಿ. ವಸಂತಕುಮಾರ್ –ವಿರುದ್ಧ– ವಿಜಯಕುಮಾರಿ* ಮೊಕದ್ದಮೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯೋಕ್ತಿಗಳು ಹೀಗಿದೆ, ಘನತೆವೆತ್ತ ಸರ್ವೋಚ್ಚ ನ್ಯಾಯಾಲಯ ಆಪಾದಿತನ ಪ್ರತಿವಾದದಲ್ಲಿನ ಪ್ರಶ್ನಿತ ಚೆಕ್ ಅನ್ನು ದೂರುದಾರರಿಗೆ ಭದ್ರತೆಯ ಆಧಾರವಾಗಿ ನೀಡಿರುತ್ತೇವೆ ಎಂಬ ಹೇಳಿಕೆಯನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ನಿರ್ಣಯಿಸಿದೆ. ಹಾಗೆಯೇ ದೂರುದಾರನ ಪರವಾಗಿ ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದಡಿಯಲ್ಲಿ ಇರುವ ಪೂರ್ವಭಾವನೆ ತೃಪ್ತಿದಾಯಕವಾಗಿ ನಿರಾಕರಿಸುವುದಕ್ಕೆ ಆಪಾದಿತ ಸಮರ್ಥನಾಗಿರುವುದಿಲ್ಲ ಎಂದು ನಿರ್ಣಯಿಸಿದೆ.

ಅಧಿವಿಚಾರಣಾ ನ್ಯಾಯಾಲಯವು ಮೇಲೆ ಈಗಾಗಲೇ ವ್ಯಕ್ತಪಡಿಸಿದ ಅಭಿಪ್ರಾಯೋಕ್ತಿಯಂತೆ, ದೂರುದಾರನು ಪ್ರಾಥಮಿಕವಾಗಿ ಹಾಲಿ ಸಾಲವನ್ನು ಕಾನೂನು ಸಮ್ಮತವಾಗಿ ಜಾರಿಗೊಳಿಸಬಹುದಾದ ಸಾಲವಾಗಿದೆ ಎಂಬುದನ್ನು ರುಜುವಾತುಪಡಿಸುವ ಹೊಣೆಯು ಫಿರ್ಯಾದುದಾರನದಾಗಿದೆ ಎಂಬ ಮೂಲ ಆಶಯದಂತೆಯೇ ಈ ವಸ್ತುವಿಷಯವನ್ನು ಪರಿಭಾವಿಸಿ ನಿರ್ಣಯಿಸಿದೆ. ಆ ಪ್ರಕ್ರಿಯೆಯಲ್ಲಿ ದೂರುದಾರನ ಹೇಳಿಕೆಯನ್ನು ಪರಿಶೀಲಿಸಿದಾಗ, ದೂರುದಾರನು ಈ ಮುಂಚೆಯೇ ಆಪಾದಿತನಿಗೆ ಕ್ರಮವಾಗಿ ನೀಡಿದ ರೂ.20,000/– ಹಾಗೂ ರೂ.10,000/–ದ ಎರಡು ಕೈ ಸಾಲಗಳಿಗೆ ಆಪಾದಿತನು ಸುಸ್ತಿದಾರನಾಗಿರುವಾಗ, ಆಪಾದಿತನಿಗೆ ಮತ್ತೆ

ರೂ.1.5ಲಕ್ಷಗಳ ಸಾಲವನ್ನು ನೀಡಿರುವುದು ಅವಿಶ್ವಾಸನೀಯತೆಯಿಂದ ಕೂಡಿದೆ ಎಂದು ಅದು ನಿರ್ಣಯಿಸಿದೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯ ಅಂಥ ನಿರ್ಣಯಕ್ಕೆ ಬರುವಾಗ ಪಾಟೀಸವಾಲಿನಲ್ಲಿ ಪ್ರಾ.ಸಾ.1 ಆಪಾದಿತನು ತನ್ನ ಪರಿಚಯಸ್ಥನಾಗಿರುತ್ತಾನೆ ಎಂದು ಮತ್ತು ಆಪಾದಿತನು ತನಗೆ ಮಾತ್ರ ಪರಿಚಯಸ್ಥನಾಗಿರದೇ ಆಪಾದಿತನ ಪತ್ನಿ ತನ್ನ (ಫಿರ್ಯಾದುದಾರನ) ನೆರೆಮನೆಯವಳಾಗಿದ್ದ ಕಾರಣದಿಂದಲೇ ತಾನು ಆಪಾದಿತನಿಗೆ ಹೆಚ್ಚಿನ ಸಾಲವನ್ನು ನೀಡಿದ್ದೇನೆ ಎಂದು ಹೇಳಿಕೆ ನೀಡಿರುತ್ತಾನೆ. ವಿಚಾರಣಾಧೀನ ನ್ಯಾಯಾಲಯ ದೂರುದಾರನ ಈ ಕಾರಣವು ವಿಶ್ವಾಸನೀಯವಾಗಿಲ್ಲವೆಂದು ಕಡೆಗಣಿಸಿದೆ. ವಿಚಾರಣಾಧೀನ ನ್ಯಾಯಾಲಯದ ಸದರಿ ಕಾರಣವು ಅವಿಶ್ವಾಸನೀಯತೆಯಿಂದ ಕೂಡಿದೆ ಎಂಬುದಕ್ಕೆ ಕಾರಣ ಕಂಡು ಬರುವುದಿಲ್ಲ.

ತದನುಸಾರವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ. ಸಿ.ಸಿ.ಸಂಖ್ಯೆ: 365/2005ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ., ಸುಳ್ಯ, ದಕ್ಷಿಣ ಕನ್ನಡ ಇವರ ದಿನಾಂಕ: 18.02.2010ರಂದು ಹೊರಡಿಸಲಾದ ಖುಲಾಸೆಯ ತೀರ್ಪನ್ನು ವಜಾಗೊಳಿಸಲಾಗಿದೆ. ಪ್ರತ್ಯರ್ಜಿದಾರ/ಆಪಾದಿತನಾದ ಕೆ. ಶಂಕರಭಟ್, ಸನ್ ಆಫ್ ತಿಮ್ಮಣ್ಣ ಭಟ್, ಕೋಡಿಯಡ್ಕ ಮನೆಯಲ್ಲಿನ ನಿವಾಸಿ, ತಣ್ಣೀರುಪಂತ ಅಂಚೆ, ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ, ಇವನು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ನ್ಯಾಯನಿರ್ಣೀತನಾಗಿರುವನು.

ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ, ಆಪಾದಿತನು ಇಂದಿನಿಂದ ಮೂರು ವಾರಗಳ ಒಳಗಾಗಿ ರೂ.1,60,000/– (ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ)ಗಳ ಜುಲ್ಮಾನೆಯನ್ನು ಸಂದಾಯ ಮಾಡುವ ದಂಡನೆಗೆ ಒಳಪಟ್ಟಿರುವನು, ಹಾಗೂ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಪಕ್ಷದಲ್ಲಿ ಆಪಾದಿತನು ಆರು ತಿಂಗಳುಗಳ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದೆಂದು ದಂಡಾದೇಶವನ್ನು ಹೊರಡಿಸಲಾಗಿದೆ. ಜುಲ್ಮಾನೆ ಮೊತ್ತದ ಸಂದಾಯದ ಸಂದರ್ಭದಲ್ಲಿ, ರೂ.1,50,000/–ದ ಮೊತ್ತವನ್ನು ಫಿರ್ಯಾದುದಾರನಾದ

**ಯೋಗೇಶ್ ಪೂಜಾರಿಗೆ ಸಂದಾಯ ಮಾಡತಕ್ಕದ್ದು ಹಾಗೂ ಉಳಿದ ಮೊತ್ತ ರೂ.10,000/– ವನ್ನು ರಾಜ್ಯದ ಲೆಕ್ಕ ಖಾತೆಗೆ ಪಡೆದುಕೊಳ್ಳತಕ್ಕದ್ದಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *(2014) 12 ಎಸ್‌ಸಿಸಿ 685*
   *ಅಜೀತ್ ಸೀಡ್ಸ್ ಲಿಮಿಟೆಡ್ –ವಿರುದ್ಧ–*
   *ಕೆ. ಗೋಪಾಲ ಕೃಷ್ಣಯ್ಯ (ಉಲ್ಲೇ) 7*
2. *(2008) 4 ಎಸ್‌ಸಿಸಿ 54*
   *ಕೃಷ್ಣ ಜನಾರ್ಧನ ಭಟ್ –ವಿರುದ್ಧ– ದತ್ತಾತ್ರೇಯ ಜಿ. ಹೆಗ್ಡೆ (ಉಲ್ಲೇ) 8*
3. *(2010) 11 ಎಸ್‌ಸಿಸಿ 441*
   *ರಂಗಪ್ಪ –ವಿರುದ್ಧ– ಶ್ರೀ ಮೋಹನ್ (ಉಲ್ಲೇ) 8*
4. *(2015) 8 ಎಸ್‌ಸಿಸಿ 378*
   *ಟಿ. ವಸಂತಕುಮಾರ್ –ವಿರುದ್ಧ– ವಿಜಯಕುಮಾರಿ (ಉಲ್ಲೇ) 9*

ಅರ್ಜಿದಾರರ ಪರ: ಶ್ರೀ ದತ್ತ ಪ್ರಸಾದ್ ಜಿ – ವಕೀಲರು
ಶ್ರೀ ಮನಮೋಹನ್ ಅವರ ಪರ ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎ. ಕೇಶವ ಭಟ್, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಡಾ॥ ಪ್ರಭಾಕರ ಶಾಸ್ತ್ರಿ:**

ಸದರಿ ಪ್ರತ್ಯರ್ಜಿದಾರರ ವಿರುದ್ಧ ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ವ.ಲಿ. ಅಧಿನಿಯಮ' ಎಂದು

ಉಲ್ಲೇಖಿಸಲಾಗಿದೆ) ಪ್ರಕರಣ 138ರ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಅಪೀಲುದಾರ ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣ (ಇದರಲ್ಲಿ ಇನ್ನು ಮುಂದು ಸಂಕ್ಷಿಪ್ತವಾಗಿ 'ದಂ.ಪ್ರ.ಸಂ' ಎಂದು ಉಲ್ಲೇಖಿಸಲಾಗಿದೆ) ಅಡಿಯಲ್ಲಿ ಅಪೀಲಿನ ಮೂಲಕ ದಾಖಲಿಸಿದ ದೂರಿನಲ್ಲಿ ಸಿ.ಸಿ.ಸಂಖ್ಯೆ: 365/2005ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಸುಳ್ಯ, ದಕ್ಷಿಣ ಕನ್ನಡ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿವಿಚಾರಣಾ ನ್ಯಾಯಾಲಯ' ಎಂದು ಉಲ್ಲೇಖಿಸಲಾಗಿದೆ) ಇವರು ದಿನಾಂಕ: 18.02.2010ರಂದು ಖುಲಾಸೆಯ ತೀರ್ಪನ್ನು ನೀಡಿರುತ್ತಾರೆ, ಇದರ ವಿರುದ್ಧ ಪ್ರತ್ಯರ್ಜಿದಾರ ಸದರಿ ಅಪೀಲನ್ನು ಸಲ್ಲಿಸಿರುವನು. ಸದರಿ ಖುಲಾಸೆ ತೀರ್ಪಿನ ವಿರುದ್ಧ ಅಪೀಲುದಾರ/ದೂರುದಾರನು ಈ ಅಪೀಲನ್ನು ದಾಖಲಿಸಿರುವನು.

2. ಅಧಿವಿಚಾರಣಾ ನ್ಯಾಯಾಲಯದಲ್ಲಿ ದೂರುದಾರನ ಮೊಕದ್ದಮೆಯ ಸಾರಾಂಶ ಹೀಗಿದೆ. ಪ್ರತ್ಯರ್ಜಿದಾರ/ ಆಪಾದಿತನು ಸಾಲದ ಮರುಪಾವತಿಗೆ ಸಂಬಂಧಿಸಿದಂತೆ ದಿನಾಂಕ: 10.12.2004ರ ತಣ್ಣೀರುಪಂತ ಸೇವಾ ಸಹಕಾರಿ ಬ್ಯಾಂಕ್ ನಿಯಮಿತದ ಚೆಕ್ ಸಂಖ್ಯೆ: 0380ರ ಮೂಲಕ ರೂ.1,50,000/– ಗಳ ಚೆಕ್ ಅನ್ನು ದೂರುದಾರನ ಹೆಸರಿಗೆ ಕೊಟ್ಟಿರುತ್ತಾನೆ. ಫಿರ್ಯಾದುದಾರನು ಚೆಕ್ ಅನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಅದು 'ಧನಾದೇಶಕನಿಂದ ಸಂದಾಯ ಸ್ಥಗಿತಗೊಂಡಿರುತ್ತದೆ' ಎಂಬ ಹಿಂಬರಹದೊಂದಿಗೆ ಆತನ ಬ್ಯಾಂಕ್‌ನಿಂದ ಚೆಕ್ ಅಮಾನ್ಯಗೊಂಡು, ದಿನಾಂಕ: 23.12.2004ರಂದು ದೂರುದಾರನ ಕೈ ಸೇರಿರುತ್ತದೆ. ಈ ಸಂಬಂಧದಲ್ಲಿ ಫಿರ್ಯಾದುದಾರನು, ಕಾನೂನು ಸಮ್ಮತ ನೋಟೀಸನ್ನು ಜಾರಿ ಮಾಡಿ, ನೋಟೀಸ್ ಅನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಚೆಕ್‌ನಲ್ಲಿ ನಮೂದಿಸಿದ ಮೊತ್ತವನ್ನು ಮರು ಪಾವತಿ ಮಾಡಬೇಕೆಂದು ಒತ್ತಾಯಿಸಿ ಆಪಾದಿತನಿಗೆ ನೋಟೀಸು ಅನ್ನು ಕಳುಹಿಸಿರುತ್ತಾನೆ. ಆದಾಗ್ಯೂ, ಹೊರಡಿಸಿದ ಸದರಿ ನೋಟಿಸು ವಿಳಾಸದಾರರು ಊರಿನಲ್ಲಿ ಇಲ್ಲ ಹಾಗೂ ಪತ್ರವನ್ನು ತೆಗೆದುಕೊಳ್ಳಲು ಯಾರು ಇಲ್ಲ ಎಂಬ ಹಿಂಬರಹದೊಂದಿಗೆ ಸದರಿ ನೋಟೀಸು ವಿಳಾಸದಾರರಿಗೆ ಜಾರಿಯಾಗದೇ ದೂರುದಾರನ ಕೈ ಸೇರಿರುತ್ತದೆ. ಇಲ್ಲಿಯವರೆಗೂ

ಆಪಾದಿತನು ಕಾನೂನುಸಮ್ಮತ ನೋಟೀಸಿನಲ್ಲಿ ಸಲ್ಲಿಸಿದ ಬೇಡಿಕೆಯನ್ನು ಆಪಾದಿತನು ಪೂರೈಸಿರುವುದಿಲ್ಲ. ಈ ಕಾರಣದಿಂದ ದೂರುದಾರನು ಆಪಾದಿತನ ವಿರುದ್ಧ ಆಪಾದಿತನು ದಂಡನೀಯ ಅಪರಾಧಕ್ಕಾಗಿ ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದೂರನ್ನು ದಾಖಲಿಸಲು ಅನಿವಾರ್ಯತೆಗೊಳಗಾಗಿದ್ದಾನೆ.

3. ತನ್ನ ಮೊಕದ್ದಮೆಯನ್ನು ರುಜುವಾತುಪಡಿಸುವುದಕ್ಕೆ ಫಿರ್ಯಾದುದಾರನು ಸ್ವತಃ ತಾನೇ ಪ್ರಾ.ಸಾ.1 ಆಗಿ ವಿಚಾರಣೆಗೊಳಪಡಿಸಿಕೊಂಡಿದ್ದಾನೆ ಮತ್ತು ನಿಶಾನೆ ಪಿ.1 ರಿಂದ ಪಿ.10ರ ವರೆಗಿನ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ. ಆಪಾದಿತನ ಕಡೆಯಿಂದ, ಯಾವುದೇ ಸಾಕ್ಷಿಗಳನ್ನೂ ವಿಚಾರಣೆ ಮಾಡಿರುವುದಿಲ್ಲ. ಆದಾಗ್ಯೂ, ಆಪಾದಿತನ ಪರವಾಗಿ ನಿಶಾನೆ ಡಿ.1 ರಿಂದ ಡಿ.12 ಅನ್ನು ದಸ್ತಾವೇಜುಗಳಾಗಿ ಗುರುತು ಮಾಡಲಾಗಿದೆ. ಎರಡೂ ಕಡೆಯ ವಾದ–ವಿವಾದಗಳನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ದಿನಾಂಕ: 18.02.2010ರಂದು ಹೊರಡಿಸಿದ ಪ್ರಶ್ನಿತ ತೀರ್ಪಿನ ಮೂಲಕ ಆರೋಪಿಸಲಾದ ಅಪರಾಧದಿಂದ ಆಪಾದಿತನನ್ನು ಖುಲಾಸೆಗೊಳಿಸಿತು. ಸದರಿ ತೀರ್ಪಿನ ವಿರುದ್ಧ ಅಪೀಲುದಾರನು ಈ ಅಪೀಲನ್ನು ಸಲ್ಲಿಸಿರುವನು.

4. ಅನುಕೂಲಕರ ಉದ್ದೇಶಕ್ಕಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪಕ್ಷಕಾರರನ್ನು ಅವರ ಶ್ರೇಣಿಗನುಸಾರವಾಗಿಯೇ ಉಲ್ಲೇಖಿಸಲಾಗಿದೆ.

5. ಅಪೀಲುದಾರ/ಫಿರ್ಯಾದುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಆಪಾದಿತನಿಗೆ ತಗಾದೆ ನೋಟೀಸು ಜಾರಿ ಆಗಿಲ್ಲವೆಂದು ನಿರ್ಣಯಿಸುವ ಮೂಲಕ ತಪ್ಪನ್ನು ಎಸಗಿದೆ. ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸಿ, ಆಪಾದಿತನ ಸರಿಯಾದ ಮತ್ತು ಪೂರ್ಣ ವಿಳಾಸಕ್ಕೆ ಒಂದು ಬಾರಿ ನೋಟೀಸನ್ನು ಕಳುಹಿಸಿದ್ದರೂ, ವಿಳಾಸದಾರನು ಸದರಿ ನೋಟೀಸು ಪತ್ರವನ್ನು ಸ್ವೀಕರಿಸದಿದ್ದರೂ ಸಹ, ನೋಟೀಸನ್ನು

ಜಾರಿಗೊಳಿಸಲಾಗಿದೆಯೆಂದು ಭಾವಿಸಬೇಕಾಗುತ್ತದೆ ಎಂಬುದು ಅವರ ವಾದಾಂಶವಾಗಿದೆ.

ಎರಡನೆಯದಾಗಿ, ಅಪೀಲುದಾರ/ದೂರುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳು ಮಾಡಿದ ವಾದಾಂಶದಲ್ಲಿ, ಅಧೀನ ನ್ಯಾಯಾಲಯ ದೂರುದಾರನು ಸಾಲದ ವಸೂಲಾತಿಗಾಗಿ ಇರುವ ಕಾನೂನು ಕ್ರಮವನ್ನು ರುಜುವಾತುಪಡಿಸುವುದಕ್ಕೆ ಹೊಣೆಯಾಗಿರುತ್ತಾನೆ ಎಂಬುದು ಅಧಿವಿಚಾರಣಾ ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿ ಫಿರ್ಯಾದುದಾರನ ಪರವಾಗಿ ಕಾರ್ಯ ನಿರ್ವಹಣೆಯು ಶಾಸನಾತ್ಮಕ ಪೂರ್ವಭಾವನೆಗೂ ಸಹ ವಿರುದ್ಧವಾಗಿದೆ ಎಂಬುದು ಅವರ ವಾದಾಂಶವಾಗಿದೆ. ಈ ಸಂಬಂಧದಲ್ಲಿ, ಮಾನ್ಯ ನ್ಯಾಯವಾದಿಗಳು ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ಎರಡು ತೀರ್ಪುಗಳನ್ನು ಆಧಾರವಾಗಿ ಉಲ್ಲೇಖಿಸಿರುವರು ಹಾಗೂ ಅವುಗಳನ್ನು ಈ ಮುಂದೆ ಸುಸಂಗತವಾಗಿ ಉಲ್ಲೇಖಿಸಲಾಗಿದೆ.

6. ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ತಮ್ಮ ನ್ಯಾಯಯುತ ವಾದಗಳಲ್ಲಿ ಈಗಾಗಲೇ ಸುಸ್ಥಾಪಿತವಾದ ಕಾನೂನಿನ ತತ್ವದ ಅಭಿಪ್ರಾಯದಲ್ಲಿ ನೋಂದಾಯಿತ ಅಂಚೆಯಲ್ಲಿ ಒಂದು ಬಾರಿ ಒಂದು ಪತ್ರವನ್ನು ಸರಿಯಾದ ವಿಳಾಸಕ್ಕೆ ಕಳುಹಿಸುವುದು. ಅದರ ಹೊರತಾಗಿ ಮತ್ತು ಅದು ಪ್ರತಿಕೂಲವಾಗಿ ರುಜುವಾತಾಗುವವರೆಗೂ ಅದು ಪರಿಣಾಮಕಾರಿಯಾಗಿ ಜಾರಿಯಾಗಿದೆ ಎಂದೇ ಭಾವಿಸಬೇಕಾಗುತ್ತದೆ ಎಂಬ ಅಂಶಕ್ಕೆ ಒತ್ತು ನೀಡುತ್ತಾರೆ. ನ್ಯಾಯವಾದಿಗಳು ಆಪಾದಿತನಿಗೆ ಆರೋಪದ ನೋಟೀಸು ಜಾರಿಯಾಗಿಲ್ಲ ಎಂಬ ಅಂಶವನ್ನು ಎತ್ತಿ ಹಿಡಿಯುವ ಅವಶ್ಯಕತೆ ಇಲ್ಲವೆಂದು ವಾದಾಂಶವಾಗಿ ನ್ಯಾಯಯುತವಾಗಿ ನಿವೇದಿಸಿರುವರು. ಆದಾಗ್ಯೂ ನ್ಯಾಯವಾದಿಗಳು ಅಧಿವಿಚಾರಣಾ ನ್ಯಾಯಾಲಯವು ಮೊಕದ್ದಮೆಯ ಗುಣಾರ್ಹತೆಗಳ ಮೇಲೆ ಮಾಡಿದ ನಿರ್ಣಯದಲ್ಲಿ ಈ ನ್ಯಾಯಾಲಯದ ಯಾವುದೇ ಹಸ್ತಕ್ಷೇಪವು ಸಮರ್ಥವಾಗಿರುವುದಿಲ್ಲ ಎಂದು ನಿವೇದಿಸಿರುವರು. ಅವರು ತಮ್ಮ ವಾದಾಂಶವನ್ನು ಮುಂದುವರೆಸಿ, ಆಪಾದಿತನು ತಾನು ಈ ಮುಂಚೆಯೇ

ತೆಗೆದುಕೊಂಡ ಸಾಲವನ್ನು ಸಂದಾಯ ಮಾಡಿಲ್ಲವೆಂದು ಆಪಾದಿಸಿರುವಾಗ, ಅದೇ ಫಿರ್ಯಾದುದಾರನಿಗೆ ಮತ್ತೆ ಭಾರೀ ಪ್ರಮಾಣದ ಮೊತ್ತವನ್ನು ಸಾಲವಾಗಿ ಹೇಗೆ ನೀಡಲಾಯಿತು? ಎಂದು ನಿವೇದಿಸಿರುವರು.

ಮುಂದುವರೆದು, ಫಿರ್ಯಾದುದಾರನು ಹಣ ಲೇವಾದೇವಿ ಸಂಬಂಧದಲ್ಲಿ ಯಾವುದೇ ಲೈಸೆನ್ಸ್ ಅನ್ನು ಹೊಂದಿರುವುದಿಲ್ಲ. ಆದರೂ ಅವರು ವಿವಿಧ ಜನರಿಗೆ ಹಣ ಲೇವಾದೇವಿ ವ್ಯವಹಾರ ನಡೆಸುತ್ತಿರುವನೆಂದು ಸಹ ನಿವೇದಿಸಿರುವರು ಮತ್ತು ದೂರುದಾರನು ವಿವಿಧ ಸ್ಥಳಗಳಲ್ಲಿ ಉದ್ದೇಶ ಪೂರ್ವಕವಾಗಿಯೇ ಪಡೆದ ಚೆಕ್ಕುಗಳ ವಿರುದ್ಧ ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುತ್ತಾನೆ ಎಂದು ನಿವೇದಿಸಿರುವರು. ಈ ಎಲ್ಲಾ ಕಾರಣಗಳಿಂದಾಗಿಯೇ ಈ ಅಪೀಲು ಪುರಸ್ಕರಿಸಲು ಅರ್ಹವಾಗಿಲ್ಲವೆಂದೂ ಸಹಾ ನಿವೇದಿಸಿರುವರು.

7. ದೂರುದಾರನು, ಚೆಕ್ ಅಮಾನ್ಯಗೊಂಡ ನಂತರ ಆಪಾದಿತನಿಗೆ ಕಳುಹಿಸಿದ ಶಾಸನಬದ್ಧ ನೋಟೀಸು ಹಾಗೂ ಆ ನೋಟೀಸಿನಲ್ಲಿ ಬೇಡಿಕೆ ಇಟ್ಟ ಮೊತ್ತವನ್ನು ಭರಿಸಲು ಒತ್ತಾಯಿಸಿ, ಜಾರಿ ಮಾಡಿದ ನೋಟೀಸು ವಿಳಾಸದಾರನು ಊರಿನಲ್ಲಿ ಇಲ್ಲ ಮತ್ತು ವಸ್ತುವನ್ನು ಕ್ಲೇಮು ಮಾಡಿರುವುದಿಲ್ಲ ಎಂಬ ಅಂಚೆ ಹಿಂಬರಹದೊಂದಿಗೆ ಜಾರಿಗೊಳ್ಳದೆ ಹಿಂದಿರುಗಿದ ನೋಟೀಸು ಆದಷ್ಟು ಮಟ್ಟಿಗೆ ಪ್ರಾ.ಸಾ.1ರ ಸಾಕ್ಷ್ಯವಾಗಿದೆ ಎಂಬುದು ದೂರುದಾರನ ದೃಢೋಕ್ತಿಯಾಗಿದೆ. ಈ ಮೊಕದ್ದಮೆಯಲ್ಲಿ ಆಪಾದಿತನ ವಿಳಾಸಕ್ಕೆ ಕಾನೂನು ನೋಟೀಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ತಲುಪೊಪ್ಪಿಗೆ ಕಳುಹಿಸಲಾಗಿತ್ತು ಎಂಬುದು ವಿವಾದಾಂಶವಾಗಿರುವುದಿಲ್ಲ. ಅದರಂತೆಯೇ ನೋಂದಾಯಿತ ಅಂಚೆಯ ಮೂಲಕವೇ ಆಪಾದಿತನ ಸರಿಯಾದ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ ಎಂಬುದು ವಿವಾದಾಂಶವಾಗಿರುವುದಿಲ್ಲ. ಇದೇ ರೀತಿಯ ಸಂದರ್ಭದಲ್ಲಿ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ವರದಿಯಾಗಿರುವ ***ಅಜೀತ್ ಸೀಡ್ಸ್ ಲಿಮಿಟೆಡ್ –ವಿರುದ್ಧ– ಕೆ. ಗೋಪಾಲ ಕೃಷ್ಣಯ್ಯ***[1] ಮೊಕದ್ದಮೆಯಲ್ಲಿ

1. (2014) 12 ಎಸ್‌ಸಿಸಿ 685

ನೋಂದಾಯಿತ ಅಂಚೆಯನ್ನು ಸ್ವೀಕರಿಸದೇ ವಿಳಾಸದಾರರು ಊರಿನಲ್ಲಿ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ಹಿಂದಿರುಗಿರುವ ಸಂದರ್ಭದಲ್ಲಿ ನೋಟೀಸು ಜಾರಿಯಾಗಿದೆ ಎಂದು ಪೂರ್ವಭಾವನೆ ಮಾಡತಕ್ಕದ್ದು ಎಂದು ಸಮರ್ಥಿಸಿ ನಿರ್ಣಯಿಸಿದೆ. ಆದ್ದರಿಂದ, ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ಸದರಿ ತೀರ್ಪಿನ ಹಿನ್ನೆಲೆಯಲ್ಲಿ ಮತ್ತು ಪ್ರತ್ಯರ್ಜಿದಾರ/ಆಪಾದಿತನ ಪರವಾಗಿ ಮಾನ್ಯ ನ್ಯಾಯವಾದಿಗಳು ಆಪಾದಿತನಿಗೆ ನೋಟೀಸು ಜಾರಿಯಾಗದಿರುವ ಆರೋಪದ ಅಂಶಕ್ಕೆ ಹೆಚ್ಚಿನ ಒತ್ತು ನೀಡದೆ ನ್ಯಾಯಯುತವಾಗಿ ವಾದವನ್ನು ನಿವೇದಿಸಿದ ಸಂಗತಿಯನ್ನು ಸಹ ಇಲ್ಲಿ ಗಮನಕ್ಕೆ ತಂದುಕೊಂಡಾಗ, ಅಧೀನ ನ್ಯಾಯಾಲಯ ಆಪಾದಿತನಿಗೆ ಶಾಸನಬದ್ಧ ನೋಟೀಸು ಜಾರಿಯಾಗಿಲ್ಲವೆಂದು ನೀಡಿದ ನಿರ್ಣಯದಲ್ಲಿ ಅಭಿಪ್ರಾಯಪಡಲಾಗಿದೆ. ಅಂತೆಯೇ ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ಆಪಾದಿತನಿಗೆ ಫಿರ್ಯಾದುದಾರ ಜಾರಿ ಮಾಡಿದ ಶಾಸನಬದ್ಧ ನೋಟೀಸು ಅನುಪಾಲನೆಯಾಗಿದೆ ಎಂಬುದು ಇಲ್ಲಿ ಸುಸ್ಥಾಪಿತವಾಗುತ್ತದೆ.

8. ಫಿರ್ಯಾದುದಾರನು ತನ್ನ ದೂರಿನಲ್ಲಿ ತಾನು ಪ್ರಾ.ಸಾ.1 ಆಗಿ ತನ್ನ ಸಾಕ್ಷ್ಯದಲ್ಲಿ ನೀಡಿದ ಹೇಳಿಕೆಯಲ್ಲಿಯೂ ಪ್ರಶ್ನಿತ ರೂ.1,50,000/– ಮೊತ್ತದ ಚೆಕ್ ಅನ್ನು ಆಪಾದಿತನು ತನ್ನ ಸಾಲದಿಂದ ವಿಮುಕ್ತನಾಗುವ ಕಾರಣದಿಂದ ತನಗೆ ನೀಡಿರುತ್ತಾನೆ ಎಂದು ತಿಳಿಸಿರುತ್ತಾನೆ. ಆದಾಗ್ಯೂ, ಪ್ರತಿವಾದಿಯು ತನ್ನ ಪ್ರತಿವಾದದಲ್ಲಿ, ಫಿರ್ಯಾದುದಾರನು ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನಲ್ಲಿ ಬೇಬಿ ಫೈನಾನ್ಸ್ ಕಾರ್ಪೋರೇಷನ್ ಎಂಬ ಹಣಕಾಸು ಕಂಪನಿಯನ್ನು ನಡೆಸುತ್ತಿರುತ್ತಾನೆ. ಆತನಿಂದ ರೂ.20,000 ಹಾಗೂ ರೂ.10,000/– ಗಳ ಸಾಲವನ್ನು ತಾನು ಪಡೆದುಕೊಂಡಿರುತ್ತೇನೆಂದು ವಾದಾಂಶದಲ್ಲಿ ತಿಳಿಸಿರುತ್ತಾನೆ. ಆ ಸಾಲಗಳನ್ನು ನೀಡುವ ಸಮಯದಲ್ಲಿ, ಫಿರ್ಯಾದುದಾರನು ಸಾಲಕ್ಕೆ ಆಧಾರವಾಗಿ ಖಾಲಿ ಚೆಕ್‌ಗಳನ್ನು ಸಂಗ್ರಹಿಸಿಟ್ಟುಕೊಂಡಿರುವನು. ಆದಾಗ್ಯೂ, ಸದರಿ ಸಾಲವನ್ನು ಮರು ಸಂದಾಯ ಮಾಡಿದ್ದರೂ ಸಹ, ಫಿರ್ಯಾದುದಾರನು ಸಂಗ್ರಹಿಸಿಟ್ಟುಕೊಂಡಿರುವ ಖಾಲಿ ಚೆಕ್‌ಗಳನ್ನು ಹಿಂದಿರುಗಿಸಿರುವುದಿಲ್ಲ. ಆದರೆ ಅವನು ಆ ಚೆಕ್‌ಗಳನ್ನು ದುರುಪಯೋಗಿಸಿ ಕೊಂಡಿರುವನು ಮತ್ತು ಪ್ರಶ್ನಿತ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುವನು.

ಸದರಿ ಪ್ರತಿವಾದವನ್ನು ಆಪಾದಿತನು ತನ್ನ ಪಾಟೀ ಸವಾಲಿನಲ್ಲಿ ಮುಂದಿಟ್ಟ ಸಲಹೆಗಳನ್ನು ಪ್ರಾ.ಸಾ.1 ಗೆ ಮಾಡಿದ ಸಲಹೆಗಳೆಂದು ಪರಿಗಣಿಸಬೇಕಾಗುತ್ತದೆ. ಅಧಿವಿಚಾರಣಾ ನ್ಯಾಯಾಲಯ ತನ್ನ ಮುಂದೆ ಮಂಡಿಸಿದ ಎಲ್ಲ ಸಾಕ್ಷ್ಯವನ್ನು ವಿಶ್ಲೇಷಿಸಿ, ಕಾನೂನುಸಮ್ಮತವಾಗಿ ವಸೂಲಿಮಾಡಬಹುದಾದ ಸಾಲ ಇದಾಗಿದೆ ಎಂದು ಈ ಮೊಕದ್ದಮೆಯ ವಾದಾಂಶವು ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿನ ಪೂರ್ವಭಾವನೆಗೊಳಪಡುವ ವಸ್ತು ವಿಷಯವಾಗಿರುವುದಿಲ್ಲ ಎಂದು ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದೆ. ಆ ಸಂಬಂಧದಲ್ಲಿ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯವು, ***ಕೃಷ್ಣ ಜನಾರ್ಧನ್ ಭಟ್ –ವಿರುದ್ಧ– ದತ್ತಾತ್ರೇಯ ಜಿ. ಹೆಗ್ಡೆ***[2] ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನೂ ಇದನ್ನು ಪುಷ್ಟೀಕರಿಸುತ್ತದೆ. ಆದಾಗ್ಯೂ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯ ಕಾನೂನುಸಮ್ಮತವಾಗಿ ವಸೂಲಿ ಮಾಡಬಹುದಾದ ಸಾಲವು ಪೂರ್ವಭಾವನೆಯ ವಿಷಯವಾಗಿದೆ ಎಂಬ ಸದರಿ ಅಭಿಪ್ರಾಯೋಕ್ತಿಯನ್ನು ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ***ರಂಗಪ್ಪ –ವಿರುದ್ಧ– ಶ್ರೀ ಮೋಹನ್***[3] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು ಅಂಗೀಕರಿಸಿರುವುದಿಲ್ಲ. ಅದರಲ್ಲಿ ತೀರ್ಪಿನ ಕಂಡಿಕೆ ಸಂಖ್ಯೆ: 26ರಲ್ಲಿ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯವು ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣವು ಕಾನೂನು ಸಮ್ಮತವಾಗಿ ಅಥವಾ ಹೊಣೆಗಾರಿಕೆಯುತವಾಗಿ ಜಾರಿಗೊಳಿಸಬಹುದಾದುದಾಗಲೀ ಸಾಲವು ಒಳಗೊಳ್ಳುವುದನ್ನು ಕಡ್ಡಾಯವಾಗಿ ಪೂರ್ವಭಾವನೆ ಮಾಡುವ ಅಭಿಪ್ರಾಯೋಕ್ತಿಯನ್ನು ಸಮರ್ಥಿಸಿದೆ. ಅದರಂತೆ, ಅಷ್ಟರಮಟ್ಟಿಗೆ, (ಮೇಲಿನ) ***ಕೃಷ್ಣ ಜನಾರ್ಧನ ಭಟ್*** ಮೊಕದ್ದಮೆಯಲ್ಲಿ ಪ್ರಶ್ನಿತ ಅಭಿಪ್ರಾಯೋಕ್ತಿಗಳು ಸಮರ್ಥನೀಯವಾಗಿಲ್ಲ. ಆದ್ದರಿಂದ, ಪ್ರಸ್ತುತ ತತ್ವಗಳ ಆಧಾರದ ಮೇಲೆ ಹೇಳುವುದಾದರೆ ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣವು ಕಾನೂನು ಸಮ್ಮತವಾಗಿ ಅಥವಾ ಹೊಣೆಗಾರಿಕೆಯುತವಾಗಿ ಜಾರಿಗೊಳಿಸಬಹುದಾದ

2. (2008) 4 ಎಸ್‌ಸಿಸಿ 54
3. (2010) 11 ಎಸ್‌ಸಿಸಿ 441

ಹಾಲಿ ಸಾಲವು ಒಳಗೊಳ್ಳುವುದನ್ನು ಕಡ್ಡಾಯವಾಗಿ ಪೂರ್ವಭಾವನೆ ಮಾಡುವುದು. ಆದಾಗ್ಯೂ, ಅಂಥ ಪೂರ್ವಭಾವನೆಯು ನಿರಾಕರಣೆಯ ಸ್ವರೂಪದಲ್ಲಿದೆ.

9. ಈ ಮೊಕದ್ದಮೆಯಲ್ಲಿ ಆಪಾದಿತನು ದೂರುದಾರ ಫಿರ್ಯಾದುದಾರನಿಗೆ ಹೊರಡಿಸಿದ ಪ್ರಶ್ನಿತ ಚೆಕ್ ವಿವಾದವಾಗಿರುವುದಿಲ್ಲ. ಆಪಾದಿತನು ಸ್ವತಃ ತಾನೇ ಪ್ರಾ.ಸಾ.1 ಗೆ ತನ್ನ ಪಾಟೀ ಸವಾಲಿನಲ್ಲಿ ನಿರ್ದಿಷ್ಟವಾಗಿ ನೀಡಿದ ಹೇಳಿಕೆಯಲ್ಲಿ ಪ್ರಶ್ನಿತ ಚೆಕ್ ಅನ್ನು ತಾನೇ ದೂರುದಾರನಿಗೆ ಹೊರಡಿಸಿರುವುದಾಗಿ, ಅದರಲ್ಲೂ ತಾನು ದೂರುದಾರನಿಂದ ಈಗಾಗಲೇ ಪಡೆದ ಹಿಂದಿನ ಸಾಲದ ಮೊತ್ತ ರೂ.20,000/– ಹಾಗೂ ರೂ.10,000/– ಕ್ಕೆ ಆಧಾರವಾಗಿ ಪ್ರಶ್ನಿತ ಚೆಕ್ ಅನ್ನು ನೀಡಿರುವುದಾಗಿ ಹೇಳಿಕೆ ಕೊಟ್ಟಿರುತ್ತಾನೆ. ಆದರೆ ಪ್ರಾ.ಸಾ.1 ಸದರಿ ಹೇಳಿಕೆಯನ್ನು ಸತ್ಯವೆಂದು ಅಂಗೀಕರಿಸಿರುವುದಿಲ್ಲ. ಆದ್ದರಿಂದ, ಆಪಾದಿತನು ಮಾಡಿದ ಹೇಳಿಕೆಯನ್ನು ಫಿರ್ಯಾದುದಾರನು ಅಂಗೀಕರಿಸದೇ ಉಳಿದುಕೊಂಡಿರುವ ಈ ಹೇಳಿಕೆಯನ್ನು ರುಜುವಾತುಪಡಿಸುವ ಸಲುವಾಗಿ ಆರೋಪಿಯ ಪ್ರತಿವಾದವನ್ನು ಪರಿಗಣಿಸುವ ಅಗತ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಪುಷ್ಟೀಕರಿಸುವ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನಾಗಲೀ ಅಥವಾ ದಸ್ತಾವೇಜೀಯ ಸಾಕ್ಷ್ಯವನ್ನಾಗಲಿ ಮಂಡಿಸಲು ಅಗತ್ಯಪಡಿಸಬೇಕಾಗುತ್ತದೆ. ಆದಾಗ್ಯೂ, ಮೇಲಿನ ಅಭಿಪ್ರಾಯೋಕ್ತಿಯಂತೆ ಆಪಾದಿತನು ಮಾತ್ರವೇ ಅಂಥ ಹೇಳಿಕೆಯನ್ನು ನೀಡಿರುತ್ತಾನೆಯೇ ಹೊರತು, ಅವನ ಪಾಟೀಸವಾಲಿನಲ್ಲಿ ಪ್ರಾ.ಸಾ.1ಕ್ಕೆ ಅವನ ಪ್ರತಿವಾದದಲ್ಲಿ ಅದನ್ನು ಪುಷ್ಟೀಕರಿಸುವಂತಹ ಯಾವುದೇ ವಸ್ತುವಿಷಯವನ್ನು ಮಂಡಿಸಿರುವುದಿಲ್ಲ. ಆದ್ದರಿಂದ, ಇದೇ ಹೋಲಿಕೆಯ ಸನ್ನಿವೇಶಗಳನ್ನು ಹೊಂದಿರುವ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯದ ವರದಿಯಾಗಿರುವ ***ಟಿ. ವಸಂತಕುಮಾರ್ –ವಿರುದ್ಧ– ವಿಜಯಕುಮಾರಿ***[4] ಮೊಕದ್ದಮೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯೋಕ್ತಿಗಳು ಹೀಗಿದೆ. ಘನತೆವೆತ್ತ ಸರ್ವೋಚ್ಚ ನ್ಯಾಯಾಲಯ ಆಪಾದಿತನ ಪ್ರತಿವಾದದಲ್ಲಿನ ಪ್ರಶ್ನಿತ ಚೆಕ್ ಅನ್ನು ದೂರುದಾರರಿಗೆ ಭದ್ರತೆಯ ಆಧಾರವಾಗಿ ನೀಡಿರುತ್ತೇವೆ ಎಂಬ ಹೇಳಿಕೆಯನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ನಿರ್ಣಯಿಸಿದೆ. ಹಾಗೆಯೇ ದೂರುದಾರನ ಪರವಾಗಿ

4. (2015) 8 ಎಸ್‌ಸಿಸಿ 378

ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದಡಿಯಲ್ಲಿ ಇರುವ ಪೂರ್ವಭಾವನೆ ತೃಪ್ತಿದಾಯಕವಾಗಿ ನಿರಾಕರಿಸುವುದಕ್ಕೆ ಆಪಾದಿತನು ಸಮರ್ಥನಾಗಿರುವುದಿಲ್ಲ ಎಂದು ನಿರ್ಣಯಿಸಿದೆ.

10. ಅಧಿವಿಚಾರಣಾ ನ್ಯಾಯಾಲಯವು ಮೇಲೆ ಈಗಾಗಲೇ ವ್ಯಕ್ತಪಡಿಸಿದ ಅಭಿಪ್ರಾಯೋಕ್ತಿಯಂತೆ, ದೂರುದಾರನು ಪ್ರಾಥಮಿಕವಾಗಿ ಹಾಲಿ ಸಾಲವನ್ನು ಕಾನೂನು ಸಮ್ಮತವಾಗಿ ಜಾರಿಗೊಳಿಸಬಹುದಾದ ಸಾಲವಾಗಿದೆ ಎಂಬುದನ್ನು ರುಜುವಾತುಪಡಿಸುವ ಹೊಣೆಯು ಫಿರ್ಯಾದುದಾರನದಾಗಿದೆ ಎಂಬ ಮೂಲ ಆಶಯದಂತೆಯೇ ಈ ವಸ್ತುವಿಷಯವನ್ನು ಪರಿಭಾವಿಸಿ ನಿರ್ಣಯಿಸಿದೆ. ಆ ಪ್ರಕ್ರಿಯೆಯಲ್ಲಿ ದೂರುದಾರನ ಹೇಳಿಕೆಯನ್ನು ಪರಿಶೀಲಿಸಿದಾಗ, ದೂರುದಾರನು ಈ ಮುಂಚೆಯೇ ಆಪಾದಿತನಿಗೆ ಕ್ರಮವಾಗಿ ನೀಡಿದ ರೂ.20,000/– ಹಾಗೂ ರೂ.10,000/–ದ ಎರಡು ಕೈ ಸಾಲಗಳಿಗೆ ಆಪಾದಿತನು ಸುಸ್ತಿದಾರನಾಗಿರುವಾಗ, ಆಪಾದಿತನಿಗೆ ಮತ್ತೆ ರೂ.1.5ಲಕ್ಷಗಳ ಸಾಲವನ್ನು ನೀಡಿರುವುದು ಅವಿಶ್ವಾಸನೀಯತೆಯಿಂದ ಕೂಡಿದೆ ಎಂದು ಅದು ನಿರ್ಣಯಿಸಿದೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯ ಅಂಥ ನಿರ್ಣಯಕ್ಕೆ ಬರುವಾಗ ಪಾಟೀಸವಾಲಿನಲ್ಲಿ ಪ್ರಾ.ಸಾ.1 ಆಪಾದಿತನು ತನ್ನ ಪರಿಚಯಸ್ಥನಾಗಿರುತ್ತಾನೆ ಎಂದು ಮತ್ತು ಆಪಾದಿತನು ತನಗೆ ಮಾತ್ರ ಪರಿಚಯಸ್ಥನಾಗಿರದೇ ಆಪಾದಿತನ ಪತ್ನಿ ತನ್ನ (ಫಿರ್ಯಾದುದಾರನ) ನೆರೆಮನೆಯವಳಾಗಿದ್ದ ಕಾರಣದಿಂದಲೇ ತಾನು ಆಪಾದಿತನಿಗೆ ಹೆಚ್ಚಿನ ಸಾಲವನ್ನು ನೀಡಿದ್ದೇನೆ ಎಂದು ಹೇಳಿಕೆ ನೀಡಿರುತ್ತಾನೆ. ವಿಚಾರಣಾಧೀನ ನ್ಯಾಯಾಲಯ ದೂರುದಾರನ ಈ ಕಾರಣವು ವಿಶ್ವಾಸನೀಯವಾಗಿಲ್ಲವೆಂದು ಕಡೆಗಣಿಸಿದೆ. ವಿಚಾರಣಾಧೀನ ನ್ಯಾಯಾಲಯದ ಸದರಿ ಕಾರಣವು ಅವಿಶ್ವಾಸನೀಯತೆಯಿಂದ ಕೂಡಿದೆ ಎಂಬುದಕ್ಕೆ ಕಾರಣ ಕಂಡುಬರುವುದಿಲ್ಲ.

11. ಪ್ರತ್ಯರ್ಜಿದಾರ/ಆಪಾದಿತನ ಪರವಾಗಿ ಮಾನ್ಯ ನ್ಯಾಯವಾದಿಗಳ ತಮ್ಮ ವಾದದಲ್ಲಿ ಫಿರ್ಯಾದುದಾರನು ಒಬ್ಬ ಹಣ ಲೇವಾದೇವಿದಾರನಾಗಿರುವನೆಂದು ಮತ್ತು ಆತನು ಇಂತಹುದೇ ಹಲವಾರು ಮೊಕದ್ದಮೆಗಳನ್ನು ಅನೇಕ ವ್ಯಕ್ತಿಗಳ

ವಿರುದ್ಧ ವಿವಿಧ ಸ್ಥಳಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಹೂಡಿರುತ್ತಾನೆ ಎಂದು ಬಲವಾಗಿ ವಾದಿಸಿರುವರು. ಈ ಸಂಬಂಧದಲ್ಲಿ ನ್ಯಾಯಾವಾದಿಗಳು ಡಿ.1 ರಿಂದ ಡಿ.6ರ ವರೆಗಿನ ನಿಶಾನೆಗಳನ್ನೂ ಆಧಾರವಾಗಿ ನೀಡಿರುವರು. ಡಿ.1 ರಿಂದ ಡಿ.6ರವರೆಗಿನ ನಿಶಾನೆಗಳು, ಮೂರು ವಿಭಿನ್ನ ಖಾಸಗಿ ದೂರುಗಳ ಮತ್ತು ಮೂರು ವಿಭಿನ್ನ ಚೆಕ್‌ಗಳನ್ನು ಫಿರ್ಯಾದುದಾರನು ವಿವಿಧ ಸ್ಥಳಗಳಲ್ಲಿ ಅನೇಕ ವ್ಯಕ್ತಿಗಳ ವಿರುದ್ಧ ಒಂದೇ ರೀತಿಯ ಮೊಕದ್ದಮೆಗಳನ್ನು ಸದರಿ ಅಧಿನಿಯಮದ ಮೂಲಕ ಹೂಡಿರುತ್ತಾನೆ ಎಂಬ ಅಂಶವನ್ನು ತೋರಿಸುವ ಪ್ರಮಾಣೀಕರಿಸಿದ ಪ್ರತಿಗಳ ನಿಶಾನೆಗಳ ನಿಸ್ಸಂಶಯವಾಗಿವೆ. ಆದರೆ ದೂರುದಾರನು ಅಪಾದಿಸಲಾದ ವ್ಯಾಜ್ಯ ಕಾರಣಕ್ಕಾಗಿ ಅಥವಾ ಅವನ ಮೊಕದ್ದಮೆಯೂ ಸಂಶಯಾಸ್ಪದವಾಗಿರುವ ಕಾರಣಕ್ಕಾಗಿ ಆಪಾದಿತನ ವಿರುದ್ಧ ಪ್ರಸ್ತುತ ದೂರನ್ನು ಹೂಡುವುದಕ್ಕೆ ದೂರುದಾರರ ಹಕ್ಕನ್ನು ಹೊಂದಿಲ್ಲವೆಂದು ಹೇಳಬಾರದು. ಅಲ್ಲದೇ, ಪ್ರತ್ಯರ್ಜಿದಾರ/ಆಪಾದಿತನ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ಸದರಿ ವಾದವನ್ನು ಸಹ ಅಂಗೀಕರಿಸಲು ಸಾಧ್ಯವಿಲ್ಲ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯ ತನ್ನ ಮುಂದೆ ಮಂಡಿಸಲಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ರೂಪದಲ್ಲಿ ಲಭ್ಯವಿರುವ ವಸ್ತುವಿಷಯಗಳಿಗೆ ಅದು ತನ್ನ ಕಾರಣಗಳನ್ನು ಸ್ಥಿರೀಕರಿಸದ ಹೊರತು, ಅದು ತಾನೇ ಸ್ವತಃ ಕೆಲವು ವಿಷಯಗಳನ್ನು ಭಾವಿಸಿಕೊಂಡು ವಸ್ತುವಿಷಯವನ್ನು ನಿರ್ಣಯಿಸಿದೆ. ಭಾವಿತ ವಸ್ತುವಿಷಯಗಳು ಎಂದರೆ, ಫಿರ್ಯಾದುದಾರನ ರೂ.1.5 ಲಕ್ಷಗಳ ಸಾಲಕ್ಕಾಗಿ ಯಾವುದೇ ದಸ್ತಾವೇಜುಗಳನ್ನು ಸಿದ್ಧಪಡಿಸಿಕೊಳ್ಳದಿರುವುದು ಮತ್ತು ಫಿರ್ಯಾದುದಾರನ ಆದಾಯ ತೆರಿಗೆ ಸಲ್ಲಿಕೆಗಳಲ್ಲಿ ಆರೋಪ ಮಾಡಿದ ಸಾಲದ ವ್ಯವಹಾರದ ಆರೋಪವನ್ನು ಬಹಿರಂಗಪಡಿಸದಿರುವ ಬಗ್ಗೆ ಸಹ ಭಾವಿತ ವಸ್ತುವಿಷಯವಾಗಿದೆ.

ಆಪಾದಿತನು ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿ ಫಿರ್ಯಾದುದಾರನ ಪರವಾಗಿ ಹಾಲಿ ಪೂರ್ವಭಾವನೆಯನ್ನು ನಿರಾಕರಿಸುವ ಪ್ರಕ್ರಿಯೆಯಲ್ಲಿರುವಾಗ ಆರೋಪಿಸಲಾದ ಸಾಲದ ವ್ಯವಹಾರದ ಬಗ್ಗೆ ಯಾವುದೇ ದಸ್ತಾವೇಜಿನ ಗೈರುಹಾಜರಿಯನ್ನು ಆದಾಯ ತೆರಿಗೆ ಸಲ್ಲಿಕೆಯಲ್ಲಿ ಆರೋಪಿಸಲಾದ ಸಾಲದ ವ್ಯವಹಾರವನ್ನು ಬಹಿರಂಗಪಡಿಸದಿರುವ ಗೈರುಹಾಜರಿಯನ್ನು

ಸಹ ದೂರುದಾರನು ಪಾಟೀಸವಾಲಿನಲ್ಲಿ ಅವನು ತನ್ನ ಪರವಾಗಿ ಪೂರಕವಾದ ಪ್ರತ್ಯುತ್ತರವಾಗಿ ಹೆಚ್ಚಿನ ವಸ್ತುವಿಷಯಗಳ ರೂಪದಲ್ಲಾಗಲೀ ಅಥವಾ ದಸ್ತಾವೇಜಿನ ರೂಪದಲ್ಲಾಗಲೀ ಅಥವಾ ಕೊನೇಪಕ್ಷ ನ್ಯಾಯಾಲಯದ ಗಮನಕ್ಕೆ ತರುವುದಕ್ಕಾಗಲೀ ಮಂಡಿಸಲು ಅಗತ್ಯಪಡಿಸುವುದು ಮತ್ತು ಅಂಥ ಒಂದು ನ್ಯಾಯ ನಿರ್ಣಯವನ್ನು, ನಿರ್ದಿಷ್ಟವಾಗಿ ಪಡೆಯುವ ಸಲುವಾಗಿ ಮೊಕದ್ದಮೆಯ ವಾರೆಂಟುಗಳ ಸನ್ನಿವೇಶಗಳಲ್ಲಿ ಅದನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ದೂರುದಾರನಿಗೆ ಮಾಡಿದ ಸಲಹೆಗಳು ಹೀಗಿದೆ. ದೂರುದಾರನು ತನ್ನ ಆದಾಯ ತೆರಿಗೆ ಸಲ್ಲಿಕೆಗಳಲ್ಲಿ ಆರೋಪಿತ ಸಾಲದ ವ್ಯವಹಾರವನ್ನು ಬಹಿರಂಗಪಡಿಸದಿರುವುದು ಅಥವಾ ದೂರುದಾರನ ಹೇಳಿಕೆಯಿಂದ ಪ್ರಕಟವಾದ ತನ್ನ ಆದಾಯ ತೆರಿಗೆ ಸಲ್ಲಿಕೆಯಲ್ಲಿ ಆರೋಪಿತ ಸಾಲದ ವ್ಯವಹಾರವು ಬಹಿರಂಗಗೊಳ್ಳದಿರುವ ಹೇಳಿಕೆಯೂ ಸಹ ಸ್ವತಃ ಯುಕ್ತವಾಗಿರುವುದಿಲ್ಲ. ಹಾಗೆಯೇ ಆರೋಪಿಗೆ ಫಿರ್ಯಾದುದಾರನು ಒಬ್ಬ ಆದಾಯ ತೆರಿಗೆದಾರನೆಂದು ಅಥವಾ ದೂರುದಾರನು ತೆರಿಗೆದಾರನಾಗಬೇಕಾದವನೆಂದು ಸುಸ್ಥಾಪಿಸಲು ಅಗತ್ಯಪಡಿಸಬೇಕಾಗುತ್ತದೆ ಮತ್ತು ದೂರುದಾರನು ದಾಖಲಿಸಿದ ಆದಾಯ ತೆರಿಗೆ ನಿರ್ಧರಣೆಗಳ ಸ್ವರೂಪದ್ದು ಮತ್ತು ಆದಾಯ ತೆರಿಗೆ ಸಲ್ಲಿಕೆಗಳಲ್ಲಿ ಅವನು ಆರೋಪಿತ ವ್ಯವಹರಣೆಯನ್ನು ಬಹಿರಂಗಪಡಿಸುವುದೇ ಅಥವಾ ಪ್ರಶ್ನಿತ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಡುವುದಕ್ಕೆ ಆರೋಪಿಗೆ ಅಗತ್ಯಪಡಿಸುತ್ತದೆ. ಈ ಎಲ್ಲ ವಿವರಗಳ ಗೈರುಹಾಜರಿಯಲ್ಲಿ ಆರೋಪಿತ ಋಣ ಅಥವಾ ಹೊಣೆಗಾರಿಕೆಯ ಮೇಲೆ ಮಾಡಿದ ಸಲಹೆಗಳು ಹೀಗಿದೆ. ಆರೋಪಿತ ಸಾಲವು ಆದಾಯ ತೆರಿಗೆ ಸಲ್ಲಿಕೆಯಲ್ಲಿ ಪ್ರತಿಬಿಂಬಿತವಾಗಿಲ್ಲ ಎಂಬ ಅಂಶದಿಂದ ಪ್ರತಿಕೂಲ ಊಹೆಯನ್ನು ಪಡೆಯುವುದಕ್ಕೆ ಸ್ವತಃ ಈ ಅಂಶವೊಂದೇ ಯುಕ್ತವಾಗಿರುವುದಿಲ್ಲ ಮತ್ತು ದೂರುದಾರನ ಪರವಾಗಿ ಕಾನೂನುಸಮ್ಮತವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಪೂರ್ವಭಾವನೆ ಮಾಡಬಹುದಾದ ಋಣವಾಗಿರುವುದಿಲ್ಲ ಎಂಬುದನ್ನು ಆರೋಪಿಯು ಯಶಸ್ವಿಯಾಗಿ ನಿರಾಕರಿಸಿರುತ್ತಾನೆ ಎಂದು ನಿರ್ಣಯಿಸಿದೆ.

ಪ್ರಸ್ತುತ ಮೊಕದ್ದಮೆಯಲ್ಲಿ ಅಧಿವಿಚಾರಣಾ ನ್ಯಾಯಾಲಯ ಪ್ರಾ.ಸಾ.1 ಪಾಟೀ ಸವಾಲಿನಲ್ಲಿ ಆರೋಪಿಯ ಪರವಾಗಿ ಮಾಡಿದ ಸಲಹೆಯನ್ನು ಪರಿಗಣನೆಗೆ

ತೆಗೆದುಕೊಂಡಿದೆ ಎಂದರೆ ಫಿರ್ಯಾದುದಾರನು ಒಬ್ಬ ತೆರಿಗೆದಾರನಾಗಿದ್ದಾನೆ ಮತ್ತು ಆತನು ತನ್ನ ಸಲ್ಲಿಕೆಯಲ್ಲಿ ಆರೋಪಿತ ಸಾಲದ ವ್ಯವಹರಣೆಯನ್ನು ಘೋಷಿಸಿಕೊಂಡಿಲ್ಲ ಎಂಬುದು ಪರಿಗಣಿಸಿದೆ ಮತ್ತು ದೂರುದಾರನ ವಾದವು ಅವಿಶ್ವಾಸನೀಯವಾಗಿದೆ. ಅದೂ ನೀಡಲಾದ ಕೇವಲ ದೂರುದಾರ ತನ್ನ ಪರವಾಗಿ ವರ್ಗಾವಣೀಯ ಲಿಖಿತಗಳ ಅಧಿನಿಯಮದ 139ನೇ ಪ್ರಕರಣದ ಅಡಿಯಲ್ಲಿ ಕಾನೂನಿನ ಪೂರ್ವಭಾವನೆಯನ್ನು ಕಡೆಗಣಿಸಿರುವುದು ಅವಿಶ್ವಾಸನೀಯತೆಯಿಂದ ಕೂಡಿದೆ. ಈ ಎಲ್ಲ ಕಾರಣಗಳಿಗಾಗಿ, ಫಿರ್ಯಾದುದಾರನು ಆರೋಪಿಯು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಆರೋಪದ ತಪ್ಪಿತಸ್ಥನೆಂದು ಸಮಂಜಸವಾಗಿ ನಿಸ್ಸಂಶಯವಾಗಿ ರುಜುವಾತುಪಡಿಸಿದ್ದಾನೆ ಎಂದು ನಿರ್ಣಯಿಸಲಾಗಿದೆ. ಅದರಂತೆ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಖುಲಾಸೆಯ ತೀರ್ಪು ವಜಾಗೊಳ್ಳಲು ಅರ್ಹವಾಗಿದೆ ಮತ್ತು ಪ್ರತ್ಯರ್ಜಿದಾರ/ಆಪಾದಿತನು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯೆಂದು ಗುರಿಯಾಗಿರುವನು.

12. ತದನುಸಾರವಾಗಿ, ಅಪೀಲನ್ನು ***ಪುರಸ್ಕರಿಸಲಾಗಿದೆ.*** ಸಿ.ಸಿ.ಸಂಖ್ಯೆ: 365/2005ರಲ್ಲಿ ಮಾನ್ಯ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ., ಸುಳ್ಯ, ದಕ್ಷಿಣ ಕನ್ನಡ ಇವರ ದಿನಾಂಕ: 18.02.2010ರಂದು ಹೊರಡಿಸಲಾದ ಖುಲಾಸೆಯ ತೀರ್ಪನ್ನು ವಜಾಗೊಳಿಸಲಾಗಿದೆ. ಪ್ರತ್ಯರ್ಜಿದಾರ/ಆಪಾದಿತನಾದ ಕೆ. ಶಂಕರಭಟ್, ಸನ್ ಆಫ್ ತಿಮ್ಮಣ್ಣ ಭಟ್, ಕೋಡಿಯಡ್ಕ ಮನೆಯಲ್ಲಿನ ನಿವಾಸಿ, ತಣ್ಣಿರುಪಂತ ಅಂಚೆ, ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ, ಇವನು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138ನೇ ಪ್ರಕರಣದಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ನ್ಯಾಯನಿರ್ಣೀತನಾಗಿರುವನು.

ದಂಡನಾ ಆದೇಶದ ಸುನಾವಣೆಗೆ ಮತ್ತು ದಂಡನಾ ಆದೇಶದ ಉದ್ಘೋಷಣೆಗಾಗಿ, ಮಧ್ಯಾಹ್ನ 2.30ಕ್ಕೆ ವಸ್ತುವಿಷಯವನ್ನು ಮಂಡಿಸುವುದು.

## ದಂಡನಾ ಆದೇಶ

ದಂಡನೆಯ ಸಂಬಂಧದಲ್ಲಿ ಎರಡೂ ಪಕ್ಷಕಾರರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ.

ಅಪೀಲುದಾರ/ಫಿರ್ಯಾದುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳು ಪ್ರತ್ಯರ್ಜಿದಾರ/ಆಪಾದಿತನು ನ್ಯಾಯ ನಿರ್ಣೀತನಾಗಿರುವುದಕ್ಕಾಗಿ ಅವನ ಅಪರಾಧಕ್ಕಾಗಿ ಗರಿಷ್ಠ ದಂಡನೆಯ ಐತೀರ್ಪು ನೀಡಬೇಕೆಂದು ನಿವೇದಿಸಿರುವರು. ಪ್ರತ್ಯರ್ಜಿದಾರ/ ಆಪಾದಿತನ ಪರವಾಗಿ ಮಾನ್ಯ ನ್ಯಾಯವಾದಿಗಳು, ಆಪಾದಿತನು, ಕುಟುಂಬದ ಮುಖ್ಯಸ್ಥನಾಗಿರುವನು ಹಾಗೂ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರುವನು ಎಂದು ನಿವೇದಿಸಿ, ಸೌಮ್ಯವಾದ ಅಭಿಪ್ರಾಯೋಕ್ತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಪ್ರಾರ್ಥಿಸಿರುವರು.

ರುಜುವಾತಾದ ಅಪರಾಧಕ್ಕಾಗಿ ಕಠೋರವಾದ ದಂಡನೆಯಾಗಲೀ ಅಥವಾ ಹೆಸರಿಗಷ್ಟೇ ದಂಡನೆ ಎಂಬಂತಾಗಲೀ ದಂಡನೆಯೂ ಇರಕೂಡದು ಎಂಬುದು ದಂಡನೆಯ ಕಾರ್ಯನೀತಿಯಾಗಿದೆ. ದಂಡನೆಯು, ಆಪಾದಿತನು ಅಪರಾಧದ ತಪ್ಪಿತಸ್ಥನೆಂದು ಕಂಡುಬಂದರೆ ಆ ತಪ್ಪಿತಸ್ಥ ಅಪರಾಧದ ಪ್ರಮಾಣಾನುಸಾರವಾಗಿ ಅದು ಇರಬೇಕು.

ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ, ಆಪಾದಿತನು ಇಂದಿನಿಂದ ಮೂರು ವಾರಗಳ ಒಳಗಾಗಿ ರೂ.1,60,000/– (ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ)ಗಳ ಜುಲ್ಮಾನೆಯನ್ನು ಸಂದಾಯ ಮಾಡುವ ದಂಡನೆಗೆ ಒಳಪಟ್ಟಿರುವನು, ಹಾಗೂ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದ ಪಕ್ಷದಲ್ಲಿ ಆಪಾದಿತನು ಆರು ತಿಂಗಳುಗಳ ಅವಧಿಯ ಸಾದ ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದೆಂದು ದಂಡಾದೇಶವನ್ನು ಹೊರಡಿಸಲಾಗಿದೆ. ಜುಲ್ಮಾನೆ ಮೊತ್ತದ ಸಂದಾಯದ ಸಂದರ್ಭದಲ್ಲಿ, ರೂ.1,50,000/–ದ ಮೊತ್ತವನ್ನು

ಫಿರ್ಯಾದುದಾರನಾದ ಯೋಗೇಶ್ ಪೂಜಾರಿಗೆ ಸಂದಾಯ ಮಾಡತಕ್ಕದ್ದು ಹಾಗೂ ಉಳಿತ ಮೊತ್ತ ರೂ.10,000/- ವನ್ನು ರಾಜ್ಯದ ಲೆಕ್ಕ ಖಾತೆಗೆ ಪಡೆದುಕೊಳ್ಳತಕ್ಕದ್ದಾಗಿದೆ.

ಅಧಿವಿಚಾರಣಾ ನ್ಯಾಯಾಲಯಕ್ಕೆ ಈ ತೀರ್ಪಿನ ಒಂದು ಪ್ರತಿಯನ್ನು ಕಳುಹಿಸುವುದಕ್ಕೆ ರಿಜಿಸ್ಟ್ರಿಗೆ ನಿರ್ದೇಶಿಸಿದೆ. ಅವಶ್ಯವಿದ್ದಲ್ಲಿ, ಈ ವಸ್ತು ವಿಷಯದಲ್ಲಿ ಮುಂದಿನ ಕ್ರಮಕ್ಕಾಗಿ ಆ ಯಾವುದೇ ನ್ಯಾಯಾಲಯಕ್ಕೆ ನ್ಯಾಯ ನಿರ್ಣಯದ ಆದೇಶವನ್ನು ಹೊರಡಿಸುವುದು ಮತ್ತು ಕಾನೂನಿಗೆ ಅನುಸಾರವಾಗಿ ಮುಂದುವರೆಯುವುದು.

ಪ್ರತ್ಯರ್ಜಿದಾರನಿಗೂ ಸಹ ಈ ತೀರ್ಪಿನ ಸಂಪೂರ್ಣ ಪ್ರತಿಯನ್ನು ಈ ಕೂಡಲೇ ಉಚಿತವಾಗಿ ವಿಲೇ ಮಾಡುವುದು.